# ಮೀಲಾದುನ್ನಬಿ ಆಚರಿಸುವುದಕ್ಕೆ ಮುನ್ನ...!

قبل الاحتفال بمولد النبي صلى الله عليه وسلم...!

< الكنادي >


ಮುಹಮ್ಮದ್ ಹಂಝ ಪುತ್ತೂರು

محمد حمزة البتوري

ಪರಿಶೀಲನೆ: ಅಬ್ದುಸ್ಸಲಾಂ ಕಾಟಿಪಳ್ಳ

مراجعة: عبد السلام كاتيبلا

## ಮೀಲಾದುನ್ನಬಿ ಆಚರಿಸುವುದಕ್ಕೆ ಮುನ್ನ...!

ಮುಸಲ್ಮಾನ ಸಹೋದರರೇ! ಇದು ರಬೀಉಲ್ ಅವ್ವಲ್ ತಿಂಗಳು. ನಮ್ಮಲ್ಲಿ ಎಷ್ಟೋ ಮಂದಿ ಇದನ್ನು ಶ್ರೇಷ್ಠ ತಿಂಗಳೆಂದು ಭಾವಿಸಿ, ಅಪರಿಮಿತ ಗೌರವಾದರಗಳನ್ನು ನೀಡುತ್ತಾರೆ. ಆದರೆ ತಿಂಗಳುಗಳ ಶ್ರೇಷ್ಠತೆಯ ಬಗ್ಗೆ ಅಲ್ಲಾಹು ತಆಲಾ ಹೇಳುವುದು ಹೀಗೆ,

﴿ إِنَّ عِدَّةَ ٱلشُّهُورِ عِندَ ٱللَّهِ ٱثۡنَا عَشَرَ شَهۡرٗا فِي كِتَٰبِ ٱللَّهِ يَوۡمَ خَلَقَ ٱلسَّمَٰوَٰتِ وَٱلۡأَرۡضَ مِنۡهَآ أَرۡبَعَةٌ حُرُمٌۚ ﴾ [التوبة : 36]

*“ಆಕಾಶಗಳನ್ನು ಮತ್ತು ಭೂಮಿಯನ್ನು ಸೃಷ್ಟಿಸಿದ ದಿನದಂದು ಅಲ್ಲಾಹು ದಾಖಲಿಸಿಟ್ಟ ಪ್ರಕಾರ ಅಲ್ಲಾಹನ ಬಳಿ ತಿಂಗಳುಗಳ ಸಂಖ್ಯೆ ಹನ್ನೆರಡು. ಅವುಗಳಲ್ಲಿ ನಾಲ್ಕು ಪವಿತ್ರ ತಿಂಗಳುಗಳು.”* [ಸೂರಃ ಅತ್ತೌಬಃ 36]

ಸೃಷ್ಟಿಯ ಆರಂಭದಲ್ಲೇ ಅಲ್ಲಾಹು ತಿಂಗಳುಗಳನ್ನು ಹನ್ನೆರಡು ಎಂದು ಘೋಷಿಸಿ, ಅವುಗಳಲ್ಲಿ ನಾಲ್ಕು ತಿಂಗಳುಗಳು ಪವಿತ್ರವೆಂದಿದ್ದಾನೆ. ಅವು: ರಜಬ್, ದುಲ್‌ಕಅ್‌ದ, ದುಲ್‌ಹಿಜ್ಜ ಮತ್ತು ಮುಹರ್ರಮ್. ಕುರ್‌ಆನ್ ಮತ್ತು ಸುನ್ನತ್ತಿನಲ್ಲಿ ರಮದಾನ್, ದುಲ್‌ಹಿಜ್ಜ, ಮುಹರ್ರಮ್ ಮುಂತಾದ ತಿಂಗಳುಗಳ ಶ್ರೇಷ್ಠತೆ ಮತ್ತು ಪ್ರಾಮುಖ್ಯತೆಗಳ ಪ್ರಸ್ತಾಪವಿದೆ. ಆದರೆ ಪ್ರವಾದಿ ಮುಹಮ್ಮದ್(ﷺ) ಹುಟ್ಟಿದರೆಂದು ನಂಬಲಾಗುವ ರಬೀಉಲ್ ಅವ್ವಲ್ ತಿಂಗಳ ಬಗ್ಗೆ ಕುರ್‌ಆನಿನಲ್ಲೋ, ಸುನ್ನತ್ತಿನಲ್ಲೋ ಯಾವುದೇ ಪ್ರಸ್ತಾಪ ಬಂದಿಲ್ಲ. ಮಾತ್ರವಲ್ಲ, ಪ್ರವಾದಿ(ﷺ)ರವರು ಯಾವ ತಿಂಗಳ ಯಾವ ದಿನದಲ್ಲಿ ಹುಟ್ಟಿದರು ಎಂಬ ಬಗ್ಗೆ ಇತಿಹಾಸಕಾರರಲ್ಲಿ ಭಿನ್ನಮತವಿದೆ. ರಬೀಉಲ್ ಅವ್ವಲ್ ತಿಂಗಳು ಎಂದು ಹೇಳುವವರಲ್ಲೂ ಕೂಡ ಅದು 12ನೇ ದಿನ, 9ನೇ ದಿನ, 8ನೇ ದಿನ ಎಂಬ ವಿಭಿನ್ನ ಅಭಿಪ್ರಾಯಗಳಿವೆ.

ಪ್ರವಾದಿ(ﷺ)ರವರು ಹುಟ್ಟಿದ್ದು ರಬೀಉಲ್ ಅವ್ವಲ್ ತಿಂಗಳ 8ರಲ್ಲೋ, 9ರಲ್ಲೋ, 12ರಲ್ಲೋ, ಬೇರೆ ಯಾವುದೋ ತಿಂಗಳಲ್ಲೋ ಆಗಿರಲಿ. ಇಲ್ಲಿ ಸಮಸ್ಯೆ ಅದಲ್ಲ. ಇಲ್ಲಿ ಉದ್ಭವಿಸುವ ಪ್ರಶ್ನೆ ಪ್ರವಾದಿ(ﷺ)ರವರ ಜನ್ಮದಿನದ ಹೆಸರಲ್ಲಿ ಸಂತೋಷಕೂಟ ಹಮ್ಮಿಕೊಳ್ಳಬಹುದೇ? ಸಂತೋಷ ವಿನಿಮಯ ಮಾಡಬಹುದೇ? ಭೋಜನಕೂಟ ಏರ್ಪಡಿಸಬಹುದೇ? ಸುಗಂಧದ್ರವ್ಯ ಹಚ್ಚಿ ಹೊಸ ದಿರಿಸು, ಪೋಷಾಕು ಧರಿಸಬಹುದೇ? ಇತರ ದಿನಕ್ಕಿಂತ ಹೆಚ್ಚು ಕುರ್‌ಆನ್ ಪಾರಾಯಣ ಮಾಡಬಹುದೇ? ಪ್ರವಾದಿ(ﷺ)ರ ಹೆಸರಲ್ಲಿ ಯಾವಾಗಲೂ ಹೇಳದ ಹೆಚ್ಚುವರಿ ಸ್ವಲಾತ್‌ಗಳನ್ನು ಹೇಳಬಹುದೇ? ಗಾನಮೇಳಗಳನ್ನು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದೇ? ಪ್ರವಾದಿ(ﷺ)ರವರ ಮೌಲಿದ್ ಗೀತೆ ಪಾರಾಯಣ ಮಾಡಬಹುದೇ? ಪ್ರವಾದಿ(ﷺ)ರವರ

ಜನ್ಮದಿನದಂದು ವಿಶೇಷವಾಗಿ ಇಂತಹ ಕೃತ್ಯಗಳನ್ನು ಮಾಡಬಹುದೇ ಎಂಬುದು ಇಲ್ಲಿ ಉದ್ಭವಿಸುವ ಪ್ರಶ್ನೆ. ಇದನ್ನು ಒಬ್ಬ ಮುಸಲ್ಮಾನನಲ್ಲಿ ಕೇಳಿದರೆ, ಅದರಲ್ಲಿ ತಪ್ಪೇನು? ಎಂದು ತಟ್ಟನೆ ಉತ್ತರಿಸಬಹುದು. ಆದರೆ ಈ ಉತ್ತರ ಸರಿಯೇ ಎಂಬ ಬಗ್ಗೆ ನಾವು ಚಿಂತಿಸಬೇಕಾಗಿದೆ. ಕಾರಣ...

1. ಮುಸಲ್ಮಾನರಾದ ನಮ್ಮ ಐಹಿಕ ಅಭ್ಯುದಯಕ್ಕೆ, ಏಳಿಗೆಗೆ, ಪಾರತ್ರಿಕ ಯಶಸ್ಸು ಮತ್ತು ಯೋಗಕ್ಷೇಮಕ್ಕೆ ನಮಗೆ ಬೇಕಾಗಿರುವುದು ಎರಡು ಮೂಲಭೂತ ವಸ್ತುಗಳು ಮಾತ್ರ. ಒಂದು, ಅಲ್ಲಾಹನ ಗ್ರಂಥವಾದ ಕುರ್‌ಆನ್. ಇನ್ನೊಂದು, ಪ್ರವಾದಿ(ﷺ)ರವರು ತೋರಿಸಿಕೊಟ್ಟ ಸುನ್ನತ್. ಈ ವಿಷಯದ ಬಗ್ಗೆ ಪ್ರವಾದಿ(ﷺ)ರವರ ಆಜ್ಞೆ ಹೀಗಿದೆ,

{تَرَكْتُ فِيكُمْ أَمْرَيْنِ، لَنْ تَضِلُّوا مَا تَمَسَّكْتُمْ بِهِمَا، كِتَابَ اللَّهِ وَسُنَّةَ نَبِيِّهِ} رواه المالك في الموطأ

*"ನಾನು ನಿಮ್ಮಲ್ಲಿ ಎರಡು ವಸ್ತುಗಳನ್ನು ಬಿಟ್ಟಗಲುತ್ತಿದ್ದೇನೆ. ಅವೆರಡನ್ನು ಬಿಗಿಯಾಗಿ ಹಿಡಿದುಕೊಂಡರೆ ನೀವು ಯಾವತ್ತಿಗೂ ಪಥಭ್ರಷ್ಟರಾಗಲಾರಿರಿ. ಒಂದು ಅಲ್ಲಾಹನ ಗ್ರಂಥ. ಇನ್ನೊಂದು ನನ್ನ ಸುನ್ನತ್."* [ಮುವತ್ತ ಮಾಲಿಕ್]

ಒಬ್ಬ ಮುಸಲ್ಮಾನನಿಗೆ ಬೇಕಾದ ಮಾರ್ಗದರ್ಶನ ಮತ್ತು ಮಾರ್ಗದರ್ಶಕ ತತ್ವಗಳಿರುವುದು ಕುರ್‌ಆನ್ ಮತ್ತು ಸುನ್ನತ್ತಿನಲ್ಲಿ ಮಾತ್ರವೆಂದು ಈ ಹದೀಸಿನಲ್ಲಿ ಸ್ಪಷ್ಟವಿದೆ.

2. ಇಸ್ಲಾಂ ಒಂದು ಭರ್ತಿಯಾದ (ಪರಿಪೂರ್ಣವಾದ) ಧರ್ಮ ಹೌದೋ ಅಲ್ಲವೋ? ಇಸ್ಲಾಂ ಧರ್ಮ ಭರ್ತಿಯಾದ ಧರ್ಮ ಹೌದಾದರೆ ಅದಕ್ಕೆ ಸೇರ್ಪಡೆ ಮತ್ತು ಕಡಿತಗಳ ಅಗತ್ಯವುಂಟೇ? ಈ ಪ್ರಶ್ನೆಗೆ ಸರ್ವ ಮುಸಲ್ಮಾನರು ನೀಡುವ ಉತ್ತರ, ಇಸ್ಲಾಂ ಒಂದು ಪರಿಪೂರ್ಣ ಧರ್ಮ. ಅದಕ್ಕೆ ಯಾವುದೇ ಸೇರ್ಪಡೆ ಅಥವಾ ಕಡಿತಗಳ ಅಗತ್ಯ ಸ್ವಲ್ಪವೂ ಇಲ್ಲ ಎಂದು. ಈ ವಿಷಯದ ಬಗ್ಗೆ ಅಲ್ಲಾಹು ತಆಲಾ ಹೇಳುವುದು ಹೀಗೆ,

﴿ ٱلْيَوْمَ أَكْمَلْتُ لَكُمْ دِينَكُمْ وَأَتْمَمْتُ عَلَيْكُمْ نِعْمَتِي وَرَضِيتُ لَكُمُ ٱلْإِسْلَٰمَ دِينًا ﴾

[المائدة : 3]

*"ಇಂದು ನಾನು ನಿಮಗೆ ನಿಮ್ಮ ಧರ್ಮವನ್ನು ಭರ್ತಿ (ಪೂರ್ಣ) ಮಾಡಿದೆನು, ನಿಮ್ಮ ಮೇಲೆ ನನ್ನ ಅನುಗ್ರಹವನ್ನು ಪೂರ್ಣಗೊಳಿಸಿದೆನು ಮತ್ತು ಇಸ್ಲಾಮನ್ನು ನಿಮಗೆ ಒಂದು ಧರ್ಮ ಆಗಿ ತೃಪ್ತಿಪಟ್ಟಿರುವೆನು."* [ಸೂರಃ ಅಲ್‌ಮಾಇದಃ 3]

ಭರ್ತಿ ಎಂದರೆ ಉದಾಹರಣೆಗೆ, ಒಂದು ಲೋಟವನ್ನು ಭರ್ತಿ ಎನ್ನುವುದು, ಆ ಲೋಟದಲ್ಲಿ ಇನ್ನು ಒಂದೇ ಒಂದು ಬಿಂದು ನೀರಿನ ಅಗತ್ಯವಿಲ್ಲದ ರೀತಿಯಲ್ಲಿ ಅದು ತುಂಬಿದಾಗ ಮಾತ್ರ. ಒಂಬತ್ತು ರೂಪಾಯಿ ತೊಂಬತ್ತೊಂಬತ್ತು ಪೈಸೆಯನ್ನು ಭರ್ತಿ ಹತ್ತು ರೂಪಾಯಿ ಎಂದು ಹೇಳಲು ಸಾಧ್ಯವಿಲ್ಲ. ಭರ್ತಿ ಹತ್ತು ರೂಪಾಯಿ ಆಗಲು ಅದಕ್ಕೆ ಒಂದು ಪೈಸೆ ಸೇರಿಸಬೇಕು. ಇಸ್ಲಾಂ ಧರ್ಮವು

ಪ್ರವಾದಿ(ﷺ)ರವರ ಕಾಲದಲ್ಲೇ ಭರ್ತಿಯಾಗಿದೆ. ಅಂದರೆ ಇನ್ನು ಅದಕ್ಕೆ ಏನೇ ಸೇರಿಸಿದರೂ ಅದು ಆ ಧರ್ಮದಿಂದ ಹೊರಗುಳಿಯುತ್ತದೆಯೇ ವಿನಾ ಅದರೊಳಗೆ ಸೇರುವುದಿಲ್ಲ.

3. ಪ್ರವಾದಿ(ﷺ)ರವರು ಸತ್ಕರ್ಮ ಮತ್ತು ಪುಣ್ಯಕರ್ಮಗಳನ್ನು ನಮಗೆ ಪೂರ್ಣವಾಗಿ ವಿವರಿಸಿ ಕೊಟ್ಟಿದ್ದಾರೋ ಇಲ್ಲವೋ? ಈ ಪ್ರಶ್ನೆಗೆ ಉತ್ತರವನ್ನು ಕಂಡುಹುಡುಕಲು ಪ್ರವಾದಿ(ﷺ)ರವರ ಈ ಹದೀಸ್‌ಗಳನ್ನು ಗಮನವಿಟ್ಟು ಓದಿರಿ,

{إِنَّهُ لَمْ يَكُنْ نَبِيٌّ قَبْلِي ، إِلَّا كَانَ حَقًّا عَلَيْهِ أَنْ يَدُلَّ أُمَّتَهُ عَلَى خَيْرِ مَا يَعْلَمُهُ لَهُمْ ، وَيُنْذِرَهُمْ شَرَّ مَا يَعْلَمُهُ لَهُمْ } رواه مسلم

*"ನನಗಿಂತ ಮುಂಚೆ ಯಾವೆಲ್ಲ ಪ್ರವಾದಿಗಳು ಬಂದಿದ್ದರೋ ಅವರೆಲ್ಲರೂ, ತಮ್ಮ ಸಮುದಾಯಕ್ಕೆ ಯಾವುದೆಲ್ಲ ಒಳ್ಳೆಯದೆಂದು ಅವರು ಅರಿತಿದ್ದರೋ ಅದನ್ನು ಆಜ್ಞಾಪಿಸುವುದು ಮತ್ತು ತಮ್ಮ ಸಮುದಾಯಕ್ಕೆ ಯಾವುದೆಲ್ಲ ಕೆಟ್ಟದೆಂದು ಅವರು ಅರಿತಿದ್ದರೋ ಅದನ್ನು ವಿರೋಧಿಸುವುದು ಅವರೆಲ್ಲರ ಕಡ್ಡಾಯ ಕರ್ತವ್ಯವಾಗಿದೆ."* [ಸಹೀಹ್ ಮುಸ್ಲಿಂ]

ಪ್ರವಾದಿ(ﷺ)ರವರು ಇನ್ನೊಂದು ಹದೀಸಿನಲ್ಲಿ ಹೇಳಿದರು,

{مَا تَرَكْتُ شَيْئًا يُقَرِّبُكُمْ إِلَى اللَّهِ إِلَّا وَقَدْ أَمَرْتُكُمْ بِهِ ، وَمَا تَرَكْتُ شَيْئًا يُبْعِدُكُمْ عَنِ اللَّهِ إِلَّا وَقَدْ نَهَيْتُكُمْ عَنْهُ} رواه الطبراني بسند صحيح

*"ನಿಮ್ಮನ್ನು ಅಲ್ಲಾಹನ ಕಡೆಗೆ ಹತ್ತಿರಗೊಳಿಸುವ ಯಾವುದೇ ಒಳಿತನ್ನೂ ನಾನು ನಿಮಗೆ ಆಜ್ಞಾಪಿಸದೆ ಬಿಟ್ಟುಬಿಟ್ಟಿಲ್ಲ. ನಿಮ್ಮನ್ನು ಅಲ್ಲಾಹನಿಂದ ದೂರ ಮಾಡುವ ಯಾವುದೇ ಕೆಡುಕನ್ನೂ ನಾನು ನಿಮಗೆ ವಿರೋಧಿಸದೆ ಬಿಟ್ಟುಬಿಟ್ಟಿಲ್ಲ."* [ಅತ್ತಬರಾನೀ]

ಮೂರನೇ ಹದೀಸಿನಲ್ಲಿ ಹಝ್ರತ್ ಅಬೂದರ್(رضي الله عنه) ಹೇಳುತ್ತಾರೆ,

{لَقَدْ تَرَكَنَا مُحَمَّدٌ صَلَّى اللَّهُ عَلَيْهِ وَسَلَّمَ ، وَمَا يُحَرِّكُ طَائِرٌ جَنَاحَيْهِ فِي السَّمَاءِ إِلَّا ذَكَرَنَا مِنْهُ عِلْمًا}

رواه أحمد

*"ಆಕಾಶದಲ್ಲಿ ರೆಕ್ಕೆಗಳನ್ನು ಬಡಿಯುತ್ತಾ ಹಾರಾಡುವ ಹಕ್ಕಿಯಲ್ಲಿ ನಮಗೆ ಧಾರ್ಮಿಕವಾಗಿ ಅವಶ್ಯಕವಾದ ಯಾವುದೇ ವಿಷಯವಿದ್ದರೆ ಅದನ್ನು ಕೂಡ ನಮಗೆ ತಿಳಿಸಿಕೊಡದೆ ಪ್ರವಾದಿ(ﷺ)ರವರು ನಮ್ಮನ್ನು ಬಿಟ್ಟಗಲಲಿಲ್ಲ."* [ಮುಸ್ನದ್ ಅಹ್ಮದ್]

ಮೇಲಿನ ಮೂರು ಹದೀಸುಗಳಿಂದ ತಿಳಿದುಬರುವ ಪ್ರಕಾರ ಸತ್ಕರ್ಮ ಮತ್ತು ಪುಣ್ಯಕರ್ಮವೆಂದು ಕರೆಯಬಹುದಾದ ಯಾವುದೆಲ್ಲ ಈ ಭೂಮಿಯಲ್ಲಿ ಇದೆಯೋ ಅವೆಲ್ಲವನ್ನೂ ಪ್ರವಾದಿ(ﷺ)ರವರು

ನಮಗೆ ಕಲಿಸಿಕೊಟ್ಟೇ ನಮ್ಮಿಂದ ವಿದಾಯ ಕೋರಿದ್ದಾರೆ. ಎಲ್ಲ ವಿಧ ದುಷ್ಕರ್ಮ ಮತ್ತು ಕೆಟ್ಟಕರ್ಮಗಳ ಬಗ್ಗೆಯೂ ಅವರು ನಮಗೆ ಎಚ್ಚರಿಕೆ ಕೊಟ್ಟಿದ್ದಾರೆ. ಈಗ ಇಲ್ಲಿ ಉದ್ಭವವಾಗುವ ಪ್ರಶ್ನೆ, "ಪ್ರವಾದಿ ಜನ್ಮದಿನಾಚರಣೆ" ಅಥವಾ "ಮೀಲಾದುನ್ನಬಿ" ಎಂಬ ಹೆಸರಲ್ಲಿ ಮುಸಲ್ಮಾನರು ಮಾಡುವ ಕೃತ್ಯಗಳು ಸತ್ಕರ್ಮ ಮತ್ತು ಪುಣ್ಯಕರ್ಮ ಹೌದೋ ಅಲ್ಲವೋ? ಈ ಕೃತ್ಯಗಳು ಸತ್ಕರ್ಮ ಮತ್ತು ಪುಣ್ಯಕರ್ಮ ಅಲ್ಲವೆಂದಾದರೆ ಅವನ್ನು ಮಾಡುವುದು ವ್ಯರ್ಥ. ಮಾತ್ರವಲ್ಲ, ಸಮಯಹಾಳು, ಅನಾವಶ್ಯಕ ಧನಪೋಲು.

ಇನ್ನು ಅವು ಸತ್ಕರ್ಮ ಮತ್ತು ಪುಣ್ಯಕರ್ಮಗಳಾಗಿದ್ದರೆ ಪ್ರವಾದಿ(ﷺ)ರವರು ಅವುಗಳನ್ನು ಮಾಡುವಂತೆ ಹೇಳುತ್ತಿದ್ದರೋ ಇಲ್ಲವೋ? ಖಂಡಿತ ಹೇಳುತ್ತಿದ್ದರು. ಕಾರಣ, ಸತ್ಕರ್ಮ ಮತ್ತು ಪುಣ್ಯಕರ್ಮಗಳಲ್ಲಿ ಒಂದನ್ನೂ ಬಿಡದೆ ಪೂರ್ಣವಾಗಿ ತಿಳಿಸಿಕೊಟ್ಟ ಬಳಿಕವೇ ಅವರು ನಮ್ಮಿಂದ ಮರೆಯಾಗಿದ್ದಾರೆ. ಆದರೆ ವಿಷಾದಕರ ಸಂಗತಿಯೇನೆಂದರೆ, ನಾವು ಕುರ್‌ಆನಿನ ಕಡೆಗೆ ಮತ್ತು ಪ್ರವಾದಿ(ﷺ)ರವರ ಹದೀಸುಗಳ ಕಡೆಗೆ ತಿರುಗಿದರೆ ಮೀಲಾದುನ್ನಬಿ ಆಚರಣೆಗೆ ಯಾವುದೇ ಆಧಾರವನ್ನೂ ಕಾಣುವುದಿಲ್ಲ. ಮಾತ್ರವಲ್ಲ, ಖೈರುಲ್ ಕುರೂನ್ ಎಂದು ಕರೆಯಲಾಗುವ ಮೊದಲ ಮೂರು ತಲೆಮಾರುಗಳ ಜನರಾದ ಸಹಾಬಾಗಳು, ತಾಬಿಊನ್‌ಗಳು ಮತ್ತು ತಬಉತ್ತಾಬಿಈನ್‌ಗಳು ಮೀಲಾದುನ್ನಬಿ ಆಚರಣೆ ಮಾಡಿದ್ದಾಗಿ ನಮಗೆ ಯಾವುದೇ ಪುರಾವೆ ಸಿಗುವುದಿಲ್ಲ. ಹಾಗಾದರೆ ಮೀಲಾದುನ್ನಬಿ ಆಚರಣೆ ಆರಂಭವಾದದ್ದು ಯಾವಾಗ?

ಈಜಿಪ್ಟಿನ ಮುಫ್ತೀ ಆಗಿದ್ದ ಅಲ್ಲಾಮಾ ಮುಹಮ್ಮದ್ ಬಖೀತ್ ಹನಫೀ(ﷺ) ತಮ್ಮ 'ಅಹ್ಸನುಲ್ ಕಲಾಂ ಫೀಮಾ ಯತಅಲ್ಲಕು ಬಿಸ್ಸುನ್ನತಿ ವಲ್‌ಬಿದ್‌ಅತಿ ಮಿನಲ್ ಅಹ್ಕಾಂ' ಎಂಬ ಗ್ರಂಥದ ಪುಟ 44–45ರಲ್ಲಿ ಹೇಳುತ್ತಾರೆ,

إِنَّ أَوَّلَ مَنْ أَحْدَثَهَا بِالْقَاهِرَةِ الْخُلَفَاءُ الْفَاطِمِيُّونَ ، وَأَوَّلُهُمُ الْمُعِزُّ لِدِينِ اللَّهِ ، تَوَجَّهَ مِنَ الْمَغْرِبِ إِلَى مِصْرَ فِي شَوَّالٍ سَنَةَ 361 هـ ، فَوَصَلَ إِلَى ثَغْرِ اسْكَنْدَرِيَّةَ فِي شَعْبَانَ سَنَةَ 362 هـ ، وَدَخَلَ الْقَاهِرَةَ لِسَبْعٍ خَلَوْنَ مِنْ شَهْرِ رَمَضَانَ فِي تِلْكَ السَّنَةِ ، فَابْتَدَعُوا سِتَّةَ مَوَالِدَ: الْمَوْلِدُ النَّبَوِيُّ، وَمَوْلِدُ أَمِيرِ الْمُؤْمِنِينَ عَلِيِّ بْنِ أَبِي طَالِبٍ، وَمَوْلِدُ السَّيِّدَةِ فَاطِمَةَ الزَّهْرَاءِ، وَمَوْلِدُ الْحَسَنِ، وَمَوْلِدُ الْحُسَيْنِ، وَمَوْلِدُ الْخَلِيفَةِ الْحَاضِرِ، وَبَقِيَتْ هَذِهِ الْمَوَالِدُ عَلَى رُسُومِهَا إِلَى أَنْ أَبْطَلَهَا الْأَفْضَلُ بْنُ أَمِيرِ الْجُيُوشِ... [أحسن الكلام فيما يتعلق بالسنة والبدعة من الأحكام للعلامة محمد بخيت الحنفي ص 44-45]

*"ಕೈರೋದಲ್ಲಿ ಮೀಲಾದುನ್ನಬಿಯನ್ನು ಮೊತ್ತಮೊದಲು ಪ್ರಾರಂಭ ಮಾಡಿದ್ದು ಖಲೀಫರಾಗಿದ್ದ ಫಾತಿಮೀ ಶಿಯಾಗಳು. ಅವರಲ್ಲಿ ಮೊದಲನೆಯವನಾದ ಅಲ್‌ಮುಇಝ್ಝ್ ಹಿಜರಿ ಶಕೆ 361 ಶವ್ವಾಲ್ ತಿಂಗಳಲ್ಲಿ ಮೊರೊಕ್ಕೋದಿಂದ ಈಜಿಪ್ಟಿಗೆ ದಂಡೆತ್ತಿ ಬಂದು ಹಿಜರಿ ಶಕೆ 362 ಶಅಬಾನ್ ತಿಂಗಳಲ್ಲಿ ಅಲೆಕ್ಸಾಂಡ್ರಿಯಾ ತಲುಪಿದ. ಅಲ್ಲಿಂದ ಆತ ರಮದಾನ್ ತಿಂಗಳ ಏಳನೇ ದಿನ ಕೈರೋ ಪ್ರವೇಶ ಮಾಡಿದ. ಈತನ ಕಾಲಘಟ್ಟದಲ್ಲಿ ಅನೇಕ ಹೊಸ ಮೀಲಾದ್‌ಗಳು ಪ್ರಾರಂಭವಾದವು. ಮೀಲಾದುನ್ನಬಿ, ಮೀಲಾದ್ ಅಲೀ, ಮೀಲಾದ್ ಫಾತಿಮ, ಮೀಲಾದ್ ಹಸನ್, ಮೀಲಾದ್ ಹುಸೈನ್ ಮತ್ತು*

*ಆಡಳಿದಲ್ಲಿರುವ ಖಲೀಫರ ಮೀಲಾದ್. ಈ ಎಲ್ಲಾ ಮೀಲಾದ್‌ಗಳು (ಜನ್ಮದಿನಗಳು) ಅವುಗಳ ರೀತಿ ರಿವಾಜು ಮತ್ತು ಕಟ್ಟುಪಾಡುಗಳೊಂದಿಗೆ ಆಚರಣೆಯಲ್ಲಿದ್ದವು. ಕೊನೆಗೆ ಅಫ್ಝಲ್ ಬಿನ್ ಅಮೀರಿಲ್ ಜುಯೂಶ್ ಎಂಬ ವ್ಯಕ್ತಿ ಇವೆಲ್ಲವನ್ನೂ ಕೊನೆಗೊಳಿಸಿದ".*

ನಂತರ ಈ ಮೀಲಾದ್ ಆಚರಣೆಯನ್ನು ಉಮರ್ ಬಿನ್ ಮುಹಮ್ಮದ್ ಎಂಬ ವ್ಯಕ್ತಿ ಮೂಸುಲ್ ಮತ್ತು ಇರಾನ್‌ನಲ್ಲಿ ಪ್ರಾರಂಭ ಮಾಡಿದರು. ಇರ್ಬಲ್ ಪ್ರಾಂತ್ಯದ ಬಾದಶಹ ಮುಝಫ್ಫರುದ್ದೀನ್ ಎಂಬಾತ ಮೀಲಾದ್ ಆಚರಣೆಯನ್ನು ಅದ್ದೂರಿಯಿಂದ ಹಮ್ಮಿಕೊಳ್ಳತೊಡಗಿದರು. ಆದರೆ ಹಾಸ್ಯಾಸ್ಪದ ಸಂಗತಿಯೇನೆಂದರೆ, ಫಾತಿಮೀ ಶಿಯಾಗಳು ಆರು ಮೀಲಾದ್‌ಗಳನ್ನು ಪ್ರಾರಂಭ ಮಾಡಿದ್ದರು. ಆದರೆ ಇವತ್ತು ಮುಸಲ್ಮಾನರ ಒಂದು ದೊಡ್ಡ ಗುಂಪು ಆ ಆರು ಶಿಯಾ ಆಚರಣೆಗಳಲ್ಲಿ ಐದನ್ನು ತಿರಸ್ಕರಿಸಿ, ಕೇವಲ ಮೀಲಾದುನ್ನಬಿಯನ್ನು ಮಾತ್ರ ಸ್ವೀಕರಿಸಿ ಪ್ರವಾದಿಪ್ರೇಮದ ಹೆಸರಲ್ಲಿ ಅದನ್ನು ಆಚರಿಸುತ್ತಿದ್ದಾರೆ. ಅದನ್ನು ಸಮರ್ಥಿಸಲು ಅವರ ಮುಖಂಡರು ಕಣ್ಣಿಗೆ ಎಣ್ಣೆ ಹಚ್ಚಿ ಪುರಾವೆಗಳನ್ನು ಸಂಶೋಧಿಸುತ್ತಿದ್ದಾರೆ!

ಒಟ್ಟಿನಲ್ಲಿ, ಮೀಲಾದುನ್ನಬಿ ಫಾತಿಮೀ ಶಿಯಾಗಳು ಪ್ರಾರಂಭ ಮಾಡಿದ ಆರು ಮೀಲಾದ್‌ಗಳಲ್ಲೊಂದು. ಇದು ಪ್ರಾರಂಭವಾದದ್ದು ಪ್ರವಾದಿ(ﷺ)ರವರ ನಿಧನಾನಂತರ ಸುಮಾರು ಮುನ್ನೂರು ವರ್ಷಗಳ ಬಳಿಕ. ಇದನ್ನು ನಾವು ಬಿದ್‌ಅತ್ ಎಂದು ಕರೆಯುವುದು ಏಕೆಂದರೆ, ಖೈರುಲ್ ಕುರೂನ್ ಎಂಬ ಹೆಸರಿನ ಮೂರು ತಲೆಮಾರುಗಳಲ್ಲಿ ಯಾರೂ ಇದನ್ನು ಆಚರಿಸಿಲ್ಲ. ಪ್ರವಾದಿ(ﷺ)ರವರ ಜನ್ಮದಿನದ ಹೆಸರಲ್ಲಿ ಆಚರಿಸಲಾಗುವ ಈ ಕಾರ್ಯಕ್ರಮಕ್ಕೆ ಖುದ್ದು ಪ್ರವಾದಿಯವರದ್ದೇ ಅಂಗೀಕಾರವಿಲ್ಲ. ಪ್ರವಾದಿತ್ವ ಲಭ್ಯವಾದ ಬಳಿಕ ಪ್ರವಾದಿ(ﷺ)ರವರು 23 ವರ್ಷ ಬದುಕಿದ್ದರು. ಆದರೂ ಅವರು ಮಾತಿನ ಮೂಲಕವೋ, ಪ್ರವೃತ್ತಿಯ ಮೂಲಕವೋ, ಸೂಚನೆಯ ಮೂಲಕವೋ ಒಮ್ಮೆಯೂ ಇದನ್ನು ಆಚರಿಸಲು ಸಹಾಬಾಗಳೊಡನೆ ಹೇಳಿಲ್ಲ. ಪ್ರವಾದಿ(ﷺ)ರವರ ನಿಧನಾನಂತರ ಅಬೂ ಬಕರ್(رضي الله عنه)ರವರ ಆಡಳಿತದಲ್ಲಿ ಎರಡು ಸಾರಿ ರಬೀಉಲ್ ಅವ್ವಲ್ ತಿಂಗಳು ಬಂತು. ಅವರ ನಂತರ ಉಮರ್(رضي الله عنه)ರವರ ಆಡಳಿತಕಾಲದಲ್ಲಿ ಹನ್ನೊಂದು ಸಾರಿ ರಬೀಉಲ್ ಅವ್ವಲ್ ತಿಂಗಳು ಬಂತು. ಉಸ್ಮಾನ್(رضي الله عنه)ರವರ ಆಡಳಿತಕಾಲದಲ್ಲಿ 12 ಸಾರಿ ಬಂತು. ಅಲೀ(رضي الله عنه)ರವರ ಆಡಳಿತಕಾಲದಲ್ಲಿ 5 ಸಾರಿ ಬಂತು. ಮುಆವಿಯಾ(رضي الله عنه)ರವರ ಆಡಳಿತಕಾಲದಲ್ಲಿ 20 ಸಾರಿ ಬಂತು. ಸಹಾಬಾಗಳಲ್ಲಿ ಕೊನೆಯದಾಗಿ ನಿಧನರಾದ ಅಬೂ ತುಫೈಲ್(رضي الله عنه) ಮರಣದ ತನಕ ಹಲವಾರು ಬಾರಿ ರಬೀಉಲ್ ಅವ್ವಲ್ ತಿಂಗಳು ಬಂತು. ಆದರೂ ಸಹಾಬಾಗಳಲ್ಲಿ ಕನಿಷ್ಠ ಒಬ್ಬರೂ ಈ ದಿನವನ್ನು ಆಚರಿಸುವುದಾಗಲಿ ಇದಕ್ಕೆ ಪ್ರಾಮುಖ್ಯತೆ ನೀಡುವುದಾಗಲಿ ಮಾಡಲಿಲ್ಲ.

ಅದೇ ರೀತಿ ಇಮಾಂ ಅಬೂ ಹನೀಫ, ಇಮಾಂ ಮಾಲಿಕ್, ಇಮಾಂ ಅಶ್ಶಾಫಿಈ, ಇಮಾಂ ಅಹ್ಮದ್ ಇಬ್ನ್ ಹಂಬಲ್ ಮುಂತಾದವರ ಜೀವಿತ ಕಾಲದಲ್ಲಿ ಅನೇಕ ಬಾರಿ ಈ ದಿನ ಬಂದರೂ, ಅವರಲ್ಲಿ ಯಾರೂ ಮೀಲಾದುನ್ನಬಿ ಆಚರಿಸಲಿಲ್ಲ. ಅದಕ್ಕೆ ಪ್ರಾಮುಖ್ಯತೆಯನ್ನೂ ಕಲ್ಪಿಸಲಿಲ್ಲ. ಏನು? ಇವರಿಗೆ ಪ್ರವಾದಿ(ﷺ)ರವರಲ್ಲಿ ಪ್ರೀತಿಯಿರಲಿಲ್ಲವೇ? ಆದರೂ ಇವರೇಕೆ ಅದನ್ನು ಆಚರಿಸಲಿಲ್ಲ? ಇವರ

ಕಾಲಾನಂತರ ದೊಡ್ಡ ದೊಡ್ಡ ಹದೀಸ್ ವಿದ್ವಾಂಸರು ಮತ್ತು ಕರ್ಮಶಾಸ್ತ್ರಜ್ಞರು ಬಂದರು. ಅವರೂ ಕೂಡ ಇದಕ್ಕೆ ಪ್ರಾಮುಖ್ಯತೆ ನೀಡಲಿಲ್ಲ. ತಮ್ಮ ಗ್ರಂಥಗಳಲ್ಲಿ ಮೀಲಾದುನ್ನಬಿ ಆಚರಿಸುವ ವಿಧಾನದ ಬಗ್ಗೆ ಪ್ರಸ್ತಾಪವೆತ್ತಿಲ್ಲ. ಯಾಕೆ? ಇದಕ್ಕೆ ಕಾರಣವೇನೆಂದರೆ, ಈ ಆಚರಣೆಗೆ ಇಸ್ಲಾಂ ಧರ್ಮದೊಂದಿಗೆ ಯಾವುದೇ ಸಂಬಂಧವಿಲ್ಲ. ಒಂದು ವೇಳೆ ಈ ಆಚರಣೆಗೆ ಇಸ್ಲಾಂ ಧರ್ಮದೊಂದಿಗೆ ಸಂಬಂಧವಿರುತ್ತಿದ್ದರೆ ಖುದ್ದು ಪ್ರವಾದಿಯವರೇ ಇದನ್ನು ಆಚರಿಸುವಂತೆ ಹೇಳುತ್ತಿದ್ದರು. ಇಸ್ಲಾಮಿನೊಂದಿಗೆ ಸಂಬಂಧವಿರುವ ರಂಝಾನ್, ಬಕ್ರೀದ್ ಮೊದಲಾದ ಹಬ್ಬಗಳಂತೆ, ಸಹಾಬಾಗಳು, ಇಮಾಂಗಳು, ಹದೀಸ್ ವಿದ್ವಾಂಸರು, ಕರ್ಮಶಾಸ್ತ್ರಜ್ಞರು ಮುಂತಾದ ಎಲ್ಲರೂ ಇದನ್ನು ಶ್ರದ್ಧೆಯಿಂದ ಆಚರಿಸುತ್ತಿದ್ದರು. ಆಚರಿಸುವ ವಿಧಿವಿಧಾನಗಳನ್ನು ತಿಳಿಸಿಕೊಡುತ್ತಿದ್ದರು. ಆದರೆ ಇಸ್ಲಾಂ ಧರ್ಮ ಈಗಾಗಲೇ ಭರ್ತಿಯಾಗಿರುವುದರಿಂದ ಈ ಆಚರಣೆಯನ್ನು ಅದರೊಳಗೆ ತುರುಕಿಸಲು ಸಾಧ್ಯವಿಲ್ಲ. ಕಾರಣ, ಅದರೊಳಗೆ ಇದಕ್ಕೆ ಸ್ಥಳವೇ ಇಲ್ಲ!

ಪ್ರವಾದಿ(ﷺ)ರವರು ಹೇಳಿದರು,

{ مَنْ عَمِلَ عَمَلًا لَيْسَ عَلَيْهِ أَمْرُنَا فَهُوَ رَدٌّ } رواه مسلم

*"ನಮ್ಮ ಆಜ್ಞೆಯಿಲ್ಲದ ಒಂದು ಕೃತ್ಯವನ್ನು ಯಾರಾದರೂ ಮಾಡಿದರೆ ಅದು ತಿರಸ್ಕೃತ."* [ಸಹೀಹ್ ಮುಸ್ಲಿಂ]

{ مَنْ أَحْدَثَ فِي أَمْرِنَا هَذَا مَا لَيْسَ مِنْهُ فَهُوَ رَدٌّ } رواه البخاري ومسلم

*"ನಮ್ಮ ಈ ಧರ್ಮದಲ್ಲಿ, ಅದರಲ್ಲಿಲ್ಲದ ಒಂದು ಕೃತ್ಯವನ್ನು ಯಾರಾದರೂ ಸೇರಿಸಿದರೆ ಅದು ತಿರಸ್ಕೃತ."* [ಅಲ್‌ಬುಖಾರಿ ಮತ್ತು ಮುಸ್ಲಿಂ]

ಒಟ್ಟಿನಲ್ಲಿ, ಧರ್ಮದಲ್ಲಿ ಹೊಸದಾಗಿ ಸೇರ್ಪಡೆಯಾದ ಎಲ್ಲ ಆಚರಣೆಗಳನ್ನೂ ತೊರೆದು, ಪ್ರವಾದಿ ಮುಹಮ್ಮದ್(ﷺ)ರವರನ್ನು ಮತ್ತು ಖುಲಫಾ ರಾಶಿದೀನ್‌ರನ್ನು ಅನುಸರಿಸಲು ನಮಗೆ ಆಜ್ಞಾಪಿಸಲಾಗಿದೆ. ಪ್ರವಾದಿ(ﷺ)ರವರು ಹೇಳುತ್ತಾರೆ,

{ فَعَلَيْكُمْ بِسُنَّتِي وَسُنَّةِ الْخُلَفَاءِ الرَّاشِدِينَ الْمَهْدِيِّينَ ، تَمَسَّكُوا بِهَا وَعَضُّوا عَلَيْهَا بِالنَّوَاجِذِ ، وَإِيَّاكُمْ وَمُحْدَثَاتِ الْأُمُورِ ، فَإِنَّ كُلَّ مُحْدَثَةٍ بِدْعَةٌ ، وَكُلَّ بِدْعَةٍ ضَلَالَةٌ } رواه أبو داود، وفي رواية للنسائي { وَكُلَّ ضَلَالَةٍ فِي النَّارِ }

*"ನನ್ನ ಸುನ್ನತ್ತನ್ನು ಮತ್ತು ಸನ್ಮಾರ್ಗದಲ್ಲಿರುವ ನನ್ನ ಖುಲಫಾ ರಾಶಿದೀನ್‌ಗಳ ಸುನ್ನತ್ತನ್ನು ಬಿಗಿಯಾಗಿ ಹಿಡಿದುಕೊಳ್ಳಿರಿ. ಅವುಗಳನ್ನು ದವಡೆಹಲ್ಲುಗಳಿಂದ ಗಟ್ಟಿಯಾಗಿ ಕಚ್ಚಿಕೊಂಡಿರಿ. ಧರ್ಮದಲ್ಲಿ ಹೊಸದಾಗಿ ಸೇರ್ಪಡೆಯಾಗುವ ಆಚರಣೆಗಳ ಬಗ್ಗೆ ಎಚ್ಚರವಹಿಸಿರಿ. ಕಾರಣ, ಎಲ್ಲ ಹೊಸ*

*ಆಚರಣೆಗಳೂ ಬಿದ್‌ಅತ್‌ಗಳಾಗಿವೆ. ಎಲ್ಲ ಬಿದ್‌ಅತ್‌ಗಳು ಪಥಭ್ರಷ್ಟತೆಯಾಗಿವೆ."* [ಅಬೂದಾವೂದ್]. *"ಎಲ್ಲ ಪಥಭ್ರಷ್ಟತೆಗಳೂ ನರಕದ ಕಡೆಗೆ ಕೊಂಡೊಯ್ಯುತ್ತವೆ"* [ಅನ್ನಸಾಈ]

ಮೀಲಾದುನ್ನಬಿ ಧರ್ಮದಲ್ಲಿ ಸೇರ್ಪಡೆಗೊಂಡ ಹೊಸ ಆಚರಣೆ. ಅದೊಂದು ಬಿದ್‌ಅತ್. ಅದನ್ನು ಆಚರಿಸಿದರೆ ಅಲ್ಲಾಹನ ಬಳಿ ಯಾವುದೇ ಪುಣ್ಯ ಸಿಗುವುದಿಲ್ಲ. ಬಿದ್‌ಅತ್ ಎಂದು ಅರಿತೂ ಸಹ ಅದನ್ನು ಆಚರಿಸಿದರೆ ಶಿಕ್ಷೆಯಂತೂ ಖಂಡಿತ ಸಿಗುವುದು. ಅಲ್ಲಾಹು ಕಾಪಾಡಲಿ. ಸತ್ಯವನ್ನು ನಿಜರೂಪದಲ್ಲಿ ಅರಿಯಲು ಮತ್ತು ಆ ಸತ್ಯವನ್ನು ಹಿಂಬಾಲಿಸಲು, ಮಿಥ್ಯವನ್ನು ನಿಜರೂಪದಲ್ಲಿ ಅರಿಯಲು ಮತ್ತು ಅದನ್ನು ವರ್ಜಿಸಲು ಅಲ್ಲಾಹು ನಮ್ಮೆಲ್ಲರಿಗೂ ತೌಫೀಕ್ ದಯಪಾಲಿಸಲಿ. ಆಮೀನ್.

وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلَى آلِهِ وَصَحْبِهِ أَجْمَعِين .

*********

IslamHouse.com